**ಅಧ್ಯಕ್ಷರು** : ನಾಳೆ ತೆಗೆದುಕೊಳ್ಳೋಣ.

**(ಗೊಂದಲ)**

**ಅಧ್ಯಕ್ಷರು** : ಈಗ ಕೃಷಿ ಸಚಿವರು ಐದು ನಿಮಿಷ ಸಮಯ ಕೋರಿದ್ದಾರೆ. ದಯವಿಟ್ಟು ಸ್ವಲ್ಪ ಸಹಕರಿಸಿ, ಆಮೇಲೆ ಬಂದು ಹೇಳುತ್ತಾರೆ.

**ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು)** : ಮಾನ್ಯ ಅಧ್ಯಕ್ಷರೆ, ಈಗ ಈರುಳ್ಳಿ ಬೆಲೆ ಬಗ್ಗೆ Statement ಮಾಡಿ ಮುಗಿಸುತ್ತೇನೆ.

**ಅಧ್ಯಕ್ಷರು** : ಆಯಿತು. ಎರಡೂ ಒಟ್ಟಿಗೆ ಹೇಳಿ.

## 3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

**ವಿಷಯ : ಈರುಳ್ಳಿ ಬೆಳೆಗೆ ಬೆಂಬಲ ಬೆಲೆ ನೀಡುವ ಬಗ್ಗೆ.**

**ಮಾನ್ಯ ಕೃಷಿ ಸಚಿವರಿಂದ ಹೇಳಿಕೆ**

**ಶ್ರೀ ಉಮೇಶ್ ಕತ್ತಿ (ಮಾನ್ಯ ಕೃಷಿ ಸಚಿವರು)** : ಈರುಳ್ಳಿ ಬೆಂಬಲ ಬೆಲೆ ಬಗ್ಗೆ ಈಗ Statement ಮಾಡುತ್ತೇನೆ.

"ರಾಜ್ಯದಲ್ಲಿ ಈರುಳ್ಳಿ ಬೆಲೆ ಮುಂಗಾರು. ಹಿಂಗಾರು ಹಾಗು ಬೇಸಿಗೆ ಹಂಗಾಮಿನಲ್ಲಿ ಬೆಳೆಯಲಾಗುವುದು. ಹೆಚ್ಚಿನ ಪ್ರಮಾಣದಲ್ಲಿ ಮುಂಗಾರು ಹಂಗಾಮಿನಲ್ಲಿ ಬೆಳೆಯಲಾಗುತ್ತಿದೆ. ಈರುಳ್ಳಿಯನ್ನು ಬೆಂಬಲ ಬೆಲೆಯಲ್ಲಿ ಸೇರಿಸುವಂತೆ ರೈತ ಮುಖಂಡರು ಹಾಗೂ ಇತರ ಸಂಘ ಸಂಸ್ಥೆಯವರು ಸರ್ಕಾರದಲ್ಲಿ ಮನವಿಯನ್ನು ಸಲ್ಲಿಸಿರುತ್ತಾರೆ. ಅದಲ್ಲದೆ ನಮ್ಮ ಶಾಸಕ ಮಿತ್ರರೆಲ್ಲರೂ ನಿನ್ನೆ ಈ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಿದ್ದೇವೆ. ಈರುಳ್ಳಿ ಕೇಂದ್ರ ಸರ್ಕಾರ ಘೋಷಿಸುವ ಕನಿಷ್ಠ ಬೆಂಬಲ ಬೆಲೆಯ ಯೋಜನೆ ವ್ಯಾಪ್ತಿಗೆ ಒಳಪಡುವುದಿಲ್ಲ. ಈರುಳ್ಳಿ ಬೆಲೆ ಕುಸಿತಕ್ಕೊಳಗಾದ ಸಂದರ್ಭದಲ್ಲಿ ಮಾರುಕಟ್ಟೆ ಪ್ರವೇಶ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ರೈತರಿಂದ ಈರುಳ್ಳಿಯನ್ನು ಖರೀದಿಸಬಹುದಾಗಿದೆ. ಪ್ರಸ್ತುತ ರಾಜ್ಯದಲ್ಲಿ ಈರುಳ್ಳಿ ಬೆಲೆಯು ಕುಸಿತವಾಗಿರುವ ಹಿನ್ನೆಲೆಯಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶ ಮಾಡಿ ಬೆಂಬಲ ಬೆಲೆಯನ್ನು ನಿಗದಿಪಡಿಸಿ ರೈತರಿಂದ ಈರುಳ್ಳಿಯನ್ನು ಖರೀದಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಮಾರುಕಟ್ಟೆ ಮಧ್ಯ ಪ್ರವೇಶ ಮಾಡಿ ಈರುಳ್ಳಿ ಖರೀದಿಸುವ ಕುರಿತಂತೆ ಕೇಂದ್ರ

ಸರ್ಕಾರದ ಅನುಮತಿ ಪಡೆಯಲು, ರಾಜ್ಯ ಈರುಳ್ಳಿ ಬೆಳೆಗಾರರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರದ ಮಾರುಕಟ್ಟೆ ಮಧ್ಯ ಪ್ರವೇಶವನ್ನು ನಿರೀಕ್ಷಿಸಿ ಈರುಳ್ಳಿ ಬೆಳೆಗಾರರಿಂದ ಈರುಳ್ಳಿಯನ್ನು ಖರೀದಿಸುವ ಬಗ್ಗೆ ದಿನಾಂಕ: 13.12.2011 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಚಿವರು ಹಾಗೂ ಅಧಿಕಾರಿಗಳ ಸಭೆಯಲ್ಲಿ ತೀರ್ಮಾನವಾದ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಬೆಂಬಲ ಬೆಲೆಯಲ್ಲಿ ಈರುಳ್ಳಿಯನ್ನು ರೈತರಿಂದ ಖರೀದಿಸಲು ತೀರ್ಮಾನಿಸಿದೆ. Grade-1 ಅನ್ನು 760–00 ರೂಪಾಯಿಗಳಿಗೆ ಖರೀದಿ ಮಾಡಲು ತೀರ್ಮಾನಿಸಲಾಗಿದೆ. Grade-2 ಅನ್ನು 560–00 ರೂಪಾಯಿಗಳಿಗೆ, Grade-3 ಅನ್ನು 360–00 ರೂಪಾಯಿಗಳಿಗೆ ಖರೀದಿಸಲು ತೀರ್ಮಾನಿಸಲಾಗಿದೆ. FAQ ಆಗಿರತಕ್ಕಂಥ ಈರುಳ್ಳಿಯನ್ನು 760–00 ರೂಪಾಯಿಗಳಿಗೆ, ಅದರ ಕೆಳಗೆ ಬರುವ ಗ್ರೇಡ್–2 ಅನ್ನು 560–00 ರೂಪಾಯಿಗಳು, ಗ್ರೇಡ್–3 ಅನ್ನು 360–00 ರೂಪಾಯಿಗಳಿಗೆ ಖರೀದಿ ಮಾಡಲು ತೀರ್ಮಾನ ಮಾಡಿದ್ದೇವೆ. ನಾಳೆ ನಾವು ಸೂಚನೆ ಕೊಟ್ಟು ಮಾರುಕಟ್ಟೆಯಲ್ಲಿ ಖರೀದಿ ಮಾಡಲಿಕ್ಕೆ ಪ್ರಾರಂಭ ಮಾಡುತ್ತೇವೆ.

**(ಗೊಂದಲ)**

**ಶ್ರೀ ಹೆಚ್.ಡಿ.ರೇವಣ್ಣ** : ಭತ್ತದ ಬಗ್ಗೆ ಹೇಳಿಲ್ಲ. ಇವತ್ತು ಶುಂಠಿ ಬೆಳೆಗಾರರು ಕಷ್ಟದಲ್ಲಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಹಾಲಪ್ಪ** : ಒಂದೊಂದೇ ವಿಷಯ ಚರ್ಚೆಯಾಗಲಿ, ನಿನ್ನೆ, ಮೊನ್ನೆ ಮಾತನಾಡಿದರು. ಬರಗಾಲದ ಬಗ್ಗೆ ಮಾತನಾಡಿ ಆಯಿತು. ಒಂದು ನಿಮಿಷ ಮಾತನಾಡಲಿಕ್ಕೆ ಬಿಡಿ. ದಯವಿಟ್ಟು ನಮಗೆ ಅವಕಾಶ ಕೊಡಿ.

**ಶ್ರೀ ಸಿದ್ದರಾಮಯ್ಯ** : ನೀವು ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಾ?

**ಅಧ್ಯಕ್ಷರು** : ನೀವು ದಯವಿಟ್ಟು ಕುಳಿತುಕೊಳ್ಳಿ, ಈಗ ಭತ್ತದ ಬೆಂಬಲ ಬೆಲೆಯ ಬಗ್ಗೆ ಹತ್ತು ನಿಮಿಷದಲ್ಲಿ ತಿಳಿಸುತ್ತೇವೆಂದು ಹೇಳಿದ್ದಾರೆ.

**(ಗೊಂದಲ)**

**ಅಧ್ಯಕ್ಷರು** : ಈಗ ವಿರೋಧ ಪಕ್ಷದ ನಾಯಕರು ನಿಂತಿದ್ದಾರೆ. ನೀವು ಆಮೇಲೆ ಮಾತನಾಡಿ.

**ಶ್ರೀ ಸಿದ್ದರಾಮಯ್ಯ** : ಒಂದು ನಿಮಿಷ ಕುಳಿತುಕೊಳ್ಳಿ. ನಾನು ನಿಮಗೆ support ಮಾಡುವುದು. ಭತ್ತದ ಬೆಲೆ ಆಗಬೇಕು. ನಾವುಕೂಡ ಆಗಲೇ ಹೇಳಿದ್ದೇವೆ. ಭತ್ತದ ಬೆಲೆ ನಿಗದಿಯಾಗಬೇಕು. ಭತ್ತ ಖರೀದಿ ಕೇಂದ್ರಗಳನ್ನು ತೆಗೆಯಬೇಕೆಂಬುದರ ಬಗ್ಗೆ ನಾವು ಒತ್ತಾಯ ಮಾಡಿದ್ದೇವೆ. ಈರುಳ್ಳಿ ಬೆಲೆಯ ಬಗ್ಗೆ ಕೃಷಿ ಸಚಿವರಿಗೆ ಸಲಹೆ ಕೊಡುವುದೇನೆಂದರೆ ಈ ಸರಿ ಗ್ರೇಡ್–1, ಗ್ರೇಡ್–2, ಗ್ರೇಡ್–3 ಎಂದು ಮಾಡಲಿಕ್ಕೆ ಹೋಗಬೇಡಿ. ಏಕೆಂದರೆ ಎಲ್ಲಾ ಒಂದೇ ಗ್ರೇಡ್ ಮಾಡಿಬಿಡಿ. ಏಕೆಂದರೆ ಈ ಸಾರಿ ಮಳೆ ಇಲ್ಲದೇನೇ ಬಹಳ ತೊಂದರೆಯಾಗಿ ಈರುಳ್ಳಿ ಬೆಳೆ ನಷ್ಟವಾಗಿದೆ. ಬಹಳ ತೊಂದರೆಯಾಗಿದೆ. ಅದಕ್ಕೊಸ್ಕರ ನೀವು Grade-I, Grade-II and Grade-III ಎಂದು ಮಾಡಿದರೆ ಎಲ್ಲಾ reject ಮಾಡಿಬಿಡುತ್ತಾರೆ. ಒಂದೇ grade ಮಾಡಿ, ಬೆಂಬಲ ಬೆಲೆ ನಿಗದಿ ಮಾಡಿ, market intervention ಮಾಡಿ. ನಾನು ಹೇಳುವುದು ಸರಿಯಲ್ಲವೇ ಜಗದೀಶ್ ಶೆಟ್ಟರ್‌ರವರೇ? ನಿಮಗೆ ಎಲ್ಲಾ ಗೊತ್ತಿದೆಯಲ್ಲವೇ? ಈ ಸಲ ಮಾಡಿಕೊಳ್ಳಿ.

**ಶ್ರೀಜಗದೀಶ್ ಶೆಟ್ಟರ್** : ಒಂದೇ ಗ್ರೇಡ್ ಮಾಡುವುದಕ್ಕೆ ಆಗುವುದಿಲ್ಲ. ಪ್ರತಿ ಸಲದ್ದೂ ಹಿಂದಿನದು ನೀವು ಉದಾಹರಣೆ ತೆಗೆದುನೋಡಿ, ಮೂರು ಗ್ರೇಡ್ ಮಾಡಿದ್ದಾರೆ. ಯಾವ ಸರ್ಕಾರ ಇದ್ದಾಗಲೂ ಮಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ** : ನಾನು ಇವತ್ತು ಹೇಳುತ್ತಿದ್ದೇನೆ. ನಿಮ್ಮ ರೈತರೆ, ಅಲ್ಲಿ ಈರುಳ್ಳಿ ಬೆಳೆಯುವ ರೈತರೇ ನಿಮ್ಮ ಮೇಲೆ ತಿರುಗಿ ಬೀಳುತ್ತಾರೆ.

**ಶ್ರೀ ಜಗದೀಶ್ ಶೆಟ್ಟರ್** : ಹಿಂದೆಲ್ಲಾ ಅದೇ ರೀತಿ ಮಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ** : ಆಮೇಲೆ ಎಲ್ಲರೂ reject ಮಾಡಿಬಿಡುತ್ತಾರೆ.

**ಶ್ರೀ ಜಗದೀಶ್ ಶೆಟ್ಟರ್** : ಹಾಗೆ ಏನೂ ಇಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ನೀವು ಗ್ರೇಡ್ ಮಾಡಿದರೆ ಎಲ್ಲಾ reject ಮಾಡಿಬಿಡುತ್ತಾರೆ.

**ಶ್ರೀ ವೆಂಕಟರಾವ್ ನಾಡಗೌಡ** : ಮಾನ್ಯ ಅಧ್ಯಕ್ಷರೆ, ಈ ಸಲ ಬರಗಾಲ ಬಂದಿರುವುದರಿಂದ ಮಾಡಿ ಎಂದು ಹೇಳುವುದು. ಮಳೆ ಬಂದಿಲ್ಲವೆಂದು ಹೇಳುವುದು. ಮಳೆ ಬಂದಿಲ್ಲವೆಂದು ಮಾಡಿ.

**ಶ್ರೀ ಸಿದ್ದರಾಮಯ್ಯ** : ಈರುಳ್ಳಿ ತೆಗೆದುಕೊಳ್ಳದೇ ಇರಲಿಕ್ಕೆ ಇದು ಹುನ್ನಾರ. ನಾನು ಏನು ಹೇಳುತ್ತೇನೆ ಎಂದರೆ, ಈ ಸಲ don't distinguish

as grades. ಗ್ರೇಡ್ ಎಂದು ಮಾಡುವುದಕ್ಕೆ ಹೋಗಬೇಡಿ. ಎಲ್ಲವನ್ನೂ ಒಂದೇ ಗ್ರೇಡ್ ಎಂದು ಮಾಡಿ. ಅವರಿಗೆ ನೀವು ಏನು ಬೆಲೆ ನಿಗದಿ ಮಾಡಿದ್ದೀರಿ, ಆ ನಿಗದಿ ಪ್ರಕಾರವಾಗಿ market intervene ಮಾಡಿ, ಕೊಂಡುಕೊಳ್ಳಿ. ಸರ್ಕಾರಕ್ಕೆ ಸ್ವಲ್ಪ ನಷ್ಟವಾದರೂ ಪರವಾಗಿಲ್ಲ. Market Intervention Scheme ತಂದಿರುವುದೇ ಅದಕ್ಕೋಸ್ಕರವಲ್ಲವೆ? To stabilize the prizes in the market. Market Intervention Scheme ತಂದಿರುವುದು ಏಕೆ? To stabilize the prices in the market. ಈ ಸಾರಿ ಮಳೆಯಿಲ್ಲದೇ ಬಹಳ ತೊಂದರೆಯಾಗಿರುವುದರಿಂದ, ಇಳುವರಿ ಬಹಳ ಕಡಿಮೆಯಾಗಿರುವುದರಿಂದ, quality ಇಲ್ಲದೇ ಇರುವುದರಿಂದ, ಒಂದೇ ಗ್ರೇಡ್ ಮಾಡಬೇಕು. ಅದನ್ನು ಕೊಂಡುಕೊಳ್ಳುವಂತಹದ್ದು ಆಗಬೇಕು. ಅದರ ಜೊತೆಗೆ ಅರಿಶಿಣ ಇದೆ, ನಮ್ಮ ಕಡೆಯೆಲ್ಲಾ ಅರಿಶಿಣ ಬಹಳ ಬೆಳೆದಿದ್ದಾರೆ. ಅರಿಶಿಣವನ್ನೂ ಕೂಡ ಕೊಂಡುಕೊಳ್ಳುವುದಕ್ಕೆ ಇವತ್ತು Market Intervention Scheme ಅನ್ನು ಮಾಡಬೇಕು. ಅದಕ್ಕೋಸ್ಕರ ಸರ್ಕಾರ ಇವತ್ತು 500 ಕೋಟಿ ಹಣ ಇಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ. ಈಗ ಒಂದು ಸಾವಿರ ಕೋಟಿ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇಲ್ಲಿಯವರೆಗೆ ಅದನ್ನು ಎಷ್ಟು ಖರ್ಚು ಮಾಡಿದ್ದೀರಿ? ಅದನ್ನು ಎರಡು ಸಾವಿರ ಕೋಟಿ ಮಾಡಿ. Make it there thousand crore. ಕೇಂದ್ರ ಸರ್ಕಾರದಿಂದ ಕೊಡಿ ಎಂದು ಹೇಳಿ ಸ್ವಲ್ಪ ದುಡ್ಡನ್ನು ತೆಗೆದುಕೊಂಡು ಬನ್ನಿ. ಅದು ಏನೂ ಮಾಡದೇ ಇದ್ದರೆ ರೈತರಿಗೆ ಹೇಗೆ ಸಹಾಯವಾಗುತ್ತದೆ? ದಯವಿಟ್ಟು ಭತ್ತಕ್ಕೂ ಬೆಲೆ ನಿಗದಿ ಮಾಡಬೇಕು, ಅರಿಶಿಣಕ್ಕೂ ಮಾಡಬೇಕು, ಮತ್ತೆ ಈರುಳ್ಳಿಯನ್ನೂ ಕೂಡ ಕೊಂಡುಕೊಳ್ಳುವಂತಹದ್ದನ್ನು ಸರ್ಕಾರ ಮಾಡಬೇಕು.

**ಶ್ರೀ ಎಸ್.ಕೆ.ಬೆಳ್ಳುಬ್ಬಿ:** ಮಾನ್ಯ ಅಧ್ಯಕ್ಷರೆ, ಒಂದೇ ರೇಟ್ ಮಾಡಬೇಕು. ಕನಿಷ್ಠ ಒಂದು ಕ್ವಿಂಟಾಲ್‌ಗೆ ಒಂದು ಸಾವಿರ ರೂಪಾಯಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ** : ಕನಿಷ್ಠ ಒಂದು ಸಾವಿರ ರೂಪಾಯಿ ಮಾಡಬೇಕು.

**ಶ್ರೀ ಎಸ್.ಕೆ.ಬೆಳ್ಳುಬ್ಬಿ** : ಏಕೆಂದರೆ, ಈರುಳ್ಳಿಯನ್ನು ಇಡೀ ರಾಜ್ಯದ ತುಂಬಾ ಬೆಳೆಯುವಂತಹದ್ದು. ಇವತ್ತು ಮಳೆ ಇಲ್ಲ, ಏನೂ ಇಲ್ಲ. ಹೀಗಾಗಿ

ರೈತ ಬಹಳ ತೊಂದರೆಯಲ್ಲಿದ್ದಾನೆ. ದಯವಿಟ್ಟು ಒಂದು ಕ್ವಿಂಟಾಲ್‌ಗೆ ಒಂದು ಸಾವಿರ ರೂಪಾಯಿಗಳ ಬೆಂಬಲ ಬೆಲೆ ಮಾಡಬೇಕು ಎಂದು ಹೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ** : ಒಂದು ಸಾವಿರ ಕೇಳಿ.

**ಶ್ರೀ ಕಳಕಪ್ಪ ಜಿ. ಬಂಡಿ** : ಮಾನ್ಯ ಅಧ್ಯಕ್ಷರೆ, ನಾನು ಕೃಷಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಒಂದು ಎಕರೆ ಈರುಳ್ಳಿ ಬಿತ್ತನೆಗೆ ಅಥವಾ ನಾಟಿ ಮಾಡುವುದಕ್ಕೆ ರೈತರಿಗೆ ಸುಮಾರು 10-15 ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಇವತ್ತು ನಮ್ಮ ಈರುಳ್ಳಿ ಬೆಳೆಗಾರರು ಒಣ ಬೇಸಾಯದಲ್ಲಿ ಅದನ್ನು ಬೆಳೆಯುತ್ತಾರೆ. ಇವತ್ತು ಸಂಪೂರ್ಣವಾಗಿ ಈ ಸಲ ಬರಗಾಲ ಬಂದಿದ್ದರಿಂದ ಸರಿಯಾದ ಪೀಕು ಸಹ ಬಂದಿಲ್ಲ. ಮತ್ತೆ ಈರುಳ್ಳಿ ಪೀಕು ಒಂದೇ. ಉಳಿದ ಜೋಳ ಬಂದಿಲ್ಲ,, ಜೋಳದ ಬಿತ್ತನೆಯಾಗಿಲ್ಲ, ಕಡಲೆ ಬಿತ್ತನೆಯಾಗಿಲ್ಲ, ಗೋಧಿ ಬಿತ್ತನೆಯಾಗಿಲ್ಲ, ಯಾವುದೇ ಬಿತ್ತನೆಯನ್ನು ರೈತ ಮಾಡಿಲ್ಲ. ಇವತ್ತು ಏನು 10-15 ಸಾವಿರ ರೂಪಾಯಿಗಳು ಒಂದು ಎಕರೆಗೆ ಬರುತ್ತದೆ, ಇವತ್ತು ಒಳ್ಳೆಯ ಬೆಳೆ ಬಂದರೆ ಸುಮಾರು 20-25 ಕ್ವಿಂಟಾಲ್ ಉಳ್ಳಾಗಡ್ಡೆ ಬೆಳೆಯುತ್ತೇವೆ. ಆದರೆ, ಈ ಸಲ ಬೆಳೆದಿದ್ದು 67 ಕ್ವಿಂಟಾಲ್ ಉಳ್ಳಾಗಡ್ಡೆಯನ್ನು ನಾವು ಬೆಳೆದಿದ್ದೇವೆ. ಇವತ್ತು ಮಾನ್ಯ ಕೃಷಿ ಸಚಿವರು 760 ರೂಪಾಯಿಗಳು ಎಂದು ಹೇಳಿಬಿಟ್ಟರು. ಅದನ್ನು ಏನು ಜ್ಯೋತಿಷ್ಯರಿಂದ ತೆಗೆಸಿದ್ದರೋ ಏನೋ ಗೊತ್ತಿಲ್ಲ. ಇವತ್ತು ಸಾಹಿತ್ಯ ಸಮ್ಮೇಳನಕ್ಕೆ ಉದಾರವಾಗಿ ದೇಣಿಗೆ ಕೊಟ್ಟರು, ಸರ್ಕಾರ ಅನುದಾನ ಬಿಡುಗಡೆ ಮಾಡಿತು. ಅವರು ಏನು ನೆನಪಿಸಿಕೊಂಡರಾ? ಇವರನ್ನೇ, ಶಾಸಕರನ್ನು, ಮಂತ್ರಿಗಳನ್ನೂ ಬೈದರು, ಸರ್ಕಾರವನ್ನು ಬೈದರು. ಆದರೆ, ರೈತರಿಗೆ ಎಲ್ಲೋ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೆ ನೆನಪಿಸಿ ಕೊಳ್ಳುತ್ತಾರೆ. ಅದಕ್ಕೆ ಕೃಷಿ ಸಚಿವರಿಗೆ ಹೇಳಿದೆ. ಯಾರು ನೆನಪಿಸಿಕೊಳ್ಳುತ್ತಾರೆ, ಯಾರಿಗೆ ಅವಶ್ಯಕತೆ ಇದೆ, ಅವರಿಗೆ ದುಡ್ಡು ಬಿಡುಗಡೆ ಮಾಡಿ. ಇವತ್ತು ಸಾಹಿತ್ಯ ಸಮ್ಮೇಳನದಲ್ಲಿ ತಮ್ಮನ್ನೆಲ್ಲಾ ಅವರು ಬೈದರು. ಆದರೆ, ಅದಕ್ಕಿಂತ ಹೆಚ್ಚಾಗಿ ಇವತ್ತು ರೈತರಿಗೆ ಕೊಟ್ಟರೆ ಏನೂ ಆಗುವುದಿಲ್ಲ.

**ಅಧ್ಯಕ್ಷರು** : ಇರಲಿ. ಅದನ್ನೇ ಮತ್ತೆ ಮತ್ತೆ ಹೇಳಬೇಡಿ.

**ಶ್ರೀ ಕಳಕಪ್ಪ ಜಿ.ಬಂಡಿ** : ಮಾನ್ಯ ಅಧ್ಯಕ್ಷರೆ, ನಮ್ಮ ರೈತರೇ, ನಮ್ಮ ರಾಜ್ಯದವರು, ನಮ್ಮ ದೇಶದವರು. ಇವತ್ತು ಅವರಿಗೆ ಕೊಟ್ಟರೆ ನೆನಪಿಸಿ ಕೊಳ್ಳುತ್ತಾರೆ. ಮುಂದೆ ಒಳ್ಳೆಯ ಬಿತ್ತನೆ ಮಾಡುವುದಕ್ಕೆ ಅವರಿಗೆ ಸಹಾಯವಾ ಗುತ್ತದೆ. ಅದಕ್ಕೆ ಇವತ್ತು ಉಳ್ಳಾಗಡ್ಡೆ ಬೆಲೆಯನ್ನು ಕನಿಷ್ಠ ಒಂದು ಸಾವಿರ

ರೂಪಾಯಿ ಮಾಡಬೇಕೆಂದು ತಮ್ಮ ಮುಖಾಂತರ ಅವರನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಹೆಚ್.ಡಿ. ರೇವಣ್ಣ :** ಮಾನ್ಯ ಅಧ್ಯಕ್ಷರೆ, ಇವತ್ತು ಆಲೂಗೆಡ್ಡೆ ಯವರು ನಾಲ್ಕು ವರ್ಷಗಳಿಂದ ಸಂಪೂರ್ಣವಾಗಿ ಹೋಯಿತು, ಒಂದು ರೂಪಾಯಿ ಕೊಡಲಿಲ್ಲ ಮತ್ತು ಅದರ ಜೊತೆಗೆ ಶುಂಠಿ ಮತ್ತು ಅರಿಶಿಣ ಇವತ್ತು 1,200 ರೂಪಾಯಿಗಳು ಇದ್ದಿದ್ದು, ಕೇವಲ 300–400 ರೂಪಾಯಿ ಗಳಾಯಿತು. ಕೆಲವರು ವಿಷ ತೆಗೆದುಕೊಂಡಿದ್ದಾರೆ. ಇಲ್ಲಿಯವರೆಗೆ ಹಾಸನದಲ್ಲಿ 127 ಜನ ಸತ್ತಿದ್ದಾರೆ. ಶುಂಠಿ ಬೆಳೆ ಮತ್ತು ಅರಿಶಿಣ ಬೆಳೆ ಇವೆರಡಕ್ಕೂ ದಯಮಾಡಿ ಬೆಂಬಲ ಬೆಲೆ ಘೋಷಣೆ ಮಾಡಿ. ರೈತರಿಂದ ಖರೀದಿ ಮಾಡಿ ರೈತರನ್ನಾದರೂ ಇವತ್ತು ಉಳಿಸಿ. ದಯಮಾಡಿ ತಾವು ಭೇದ–ಭಾವ ಮಾಡಬೇಡಿ. ಈರುಳ್ಳಿ ಬೆಲೆ, ಭತ್ತದ ಬೆಲೆ ಬಗ್ಗೆ ನಾನು ಹೇಳುತ್ತಿಲ್ಲ. ಎಷ್ಟು ಬೇಕಾದರೂ ಮಾಡಿ, ಎರಡು ಸಾವಿರ ರೂಪಾಯಿಗಳನ್ನು ಮಾಡಿ, ನಾನು ಏನು ಬೇಡ ಅನ್ನುವುದಿಲ್ಲ. ಆದರೆ, ಇವತ್ತು ಶುಂಠಿ ಬೆಳೆದವರು ಇವತ್ತು ವಿಷ ತೆಗೆದುಕೊಳ್ಳುವ ಪರಿಸ್ಥಿತಿ ಆಗಿದೆ. ದಯಮಾಡಿ ತೋಟಗಾರಿಕೆ ಸಚಿವರಾದರೂ ಹೇಳಲಿ ಅಥವಾ ಕೃಷಿ ಸಚಿವರಾದರೂ ಹೇಳಲಿ. ಇಲ್ಲವೆಂದರೆ ನಾವು ಬಂದು ಧರಣಿ ಮಾಡಬೇಕಾಗುತ್ತದೆ. ದಯಮಾಡಿ ಅದಕ್ಕೆ ಅವಕಾಶ ಕೊಡುವುದು ಬೇಡವೆಂದು ತಮ್ಮ ಮುಖೇನ ತೋಟಗಾರಿಕಾ ಸಚಿವರನ್ನು ಮತ್ತು ಕೃಷಿ ಸಚಿವರನ್ನು ಕೇಳುತ್ತೇನೆ.

**ಶ್ರೀ ವೈ.ಎನ್.ರುದ್ರೇಶ್‌ಗೌಡ :** ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದಲೂ ರೈತರ ಬಗ್ಗೆ ಮಾತನಾಡುತ್ತಲೇ ಇದ್ದೇವೆ. ಆದರೆ, ಯಾವುದನ್ನು ಒಪ್ಪುತ್ತಿಲ್ಲ, even ಬರಕ್ಕೆ ಸಿಗುತ್ತಿರುವ ರೈತರಿಗೆ ಒಂದು ಪರಿಹಾರ ಕೊಡಿ ಎಂದರೂ ಒಪ್ಪುತ್ತಿಲ್ಲ. ಈರುಳ್ಳಿ ಬೆಳೆಗಾರರಿಗೆ ಪರಿಹಾರ ಕೊಡಿ ಎಂದರೂ ಒಪ್ಪುತ್ತಿಲ್ಲ. ಶುಂಠಿ ಬೆಳೆಗಾರರಿಗೆ ಪರಿಹಾರ ಕೊಡಿ ಎಂದರೂ ಒಪ್ಪುತ್ತಿಲ್ಲ. ಯಾವುದೂ ಒಪ್ಪದೇ ಇದ್ದರೆ, ರೈತರನ್ನು ಉದ್ಧಾರ ಮಾಡಿದ್ದು ಆದರೂ ಏನು? ಸರ್ಕಾರ ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :** ಮಾನ್ಯ ಅಧ್ಯಕ್ಷರೆ, ರೇವಣ್ಣನವರು ಕೇಳಿದಂತಹ ಪ್ರತಿಯೊಂದು ಪ್ರಶ್ನೆಗೆ ಮಾಹಿತಿ ತರಿಸಿ ಉತ್ತರವನ್ನು ಕೊಡಲಾಗುವುದು. ವಿರೋಧ ಪಕ್ಷದ ನಾಯಕರು ಅರಿಶಿಣದ ಬಗ್ಗೆ ಮಾಹಿತಿಯನ್ನು ಕೇಳಿದ್ದಾರೆ. ಆದಷ್ಟು ಬೇಗ ನಾಳೆಯೇ ಅದಕ್ಕೆ

ಉತ್ತರವನ್ನು ತರಿಸಿ ಕೊಡುತ್ತೇನೆ. ಬೆಲೆ ಕುಸಿತ ಕಂಡಲ್ಲಿ ಸರ್ಕಾರ ರೈತರ ಪರವಾಗಿರುವುದರಲ್ಲಿ ಯಾವುದೇ ತೊಂದರೆ ಇಲ್ಲ.

**ಶ್ರೀ ಹೆಚ್.ಡಿ. ರೇವಣ್ಣ** : ಆಯಿತು, ನಾಳೆ ಬೆಳಿಗ್ಗೆಯೇ ಮಾಡಿ ಸ್ವಾಮಿ.

**ಶ್ರೀ ಉಮೇಶ್ ವಿ. ಕತ್ತಿ** : ಮಾನ್ಯ ಅಧ್ಯಕ್ಷರೆ, ಈರುಳ್ಳಿ ಬೆಂಬಲ ಬೆಲೆಯನ್ನು ಇವತ್ತು ನಾವು ಘೋಷಣೆ ಮಾಡುತ್ತಿದ್ದೇವೆ. FAQ ಕೇಂದ್ರ ಸರ್ಕಾರದ ನಿಯಮ. ಮಾನ್ಯ ವಿರಧ ಪಕ್ಷದ ನಾಯಕರು ಹೇಳಿದ ಹಾಗೆ ಒದೇ ಬೆಲೆಯಲ್ಲಿ ನೀವು ಈರುಳ್ಳಿಯನ್ನು ಖರೀದಿ ಮಾಡುವುದಕ್ಕೆ ಕೇಂದ್ರ ಸರ್ಕಾರದ ನಿಯಮಗಳು ಇವೆ. ಆದರೆ, ನಮ್ಮ ರಾಜ್ಯದಲ್ಲಿ ಮಳೆ ಕುಂಠಿತವಾಗಿ, ಇವತ್ತಿನ ಬರಗಾಲದ ಪರಿಸ್ಥಿತಿಯಲ್ಲಿ ಎರಡು-ಮೂರು ನಮೂನೆ grading ಮಾಡಬೇಕಾಗುತ್ತದೆ. ಏಕೆಂದರೆ, FAQ ಅನ್ನು ನಾವು ಖರೀದಿ ಮಾಡುವುದಕ್ಕೆ ಹೊರಟರೆ, ನಮ್ಮ ರಾಜ್ಯದಲ್ಲಿ ಬೆಳೆದಂತಹ ಈರುಳ್ಳಿ 30% ಅಷ್ಟೇ FAQ ಬಿತ್ತನೆಯಾಗುತ್ತದೆ. ಉಳಿದಂತಹ 60-70% ಬೆಳೆ FAQ ಬೆಳೆದರೆ ಉಪಯೋಗಕ್ಕೆ ಬರದೇ ರೈತರು ತೊಂದರೆಗೆ ಸಿಕ್ಕಿಹಾಕಿಕೊಳ್ಳ ಬಾರದು. ಆ ಕಾರಣದಿಂದ ಮೂರು ಗ್ರೇಡ್‌ಗಳನ್ನು ಮಾಡಿ ನಾವು ಖರೀದಿ ಪ್ರಾರಂಭ ಮಾಡುತ್ತಿದ್ದೇವೆ. FAQ ಬರುವುದು hardly 30%. ಇನ್ನು ಉಳಿದಂತಹ 70% ಬರುವುದು II grade, III grade ಎಂದು ನಾವು ತೀರ್ಮಾನ ಮಾಡಿ ಖರೀದಿ ಮಾಡುತ್ತೇವೆ. ಒಟ್ಟಿನಲ್ಲಿ ರೈತರಿಗೆ ತೊಂದರೆ ಯಾಗಬಾರದು, ರೈತ ತೊಂದರೆಗೆ ಸಿಕ್ಕಿ ಹಾಕಿಕೊಳ್ಳಬಾರದು ಎಂಬ ದೃಷ್ಟಿಯಿಂದ ಈ ಮೂರು ಗ್ರೇಡ್‌ಗಳನ್ನು ಮಾಡಿ ತೀರ್ಮಾನ ಮಾಡಿದ್ದೇವೆ. 2005-06ರಲ್ಲಿ ಖರೀದಿ ಮಾಡಿದಾಗಲೂ ಸಹ ಮೂರು ಗ್ರೇಡ್‌ಗಳನ್ನಾಗಿ ಖರೀದಿ ಮಾಡಿದಂತಹ ಉದಾಹರಣೆಗಳು ನಮ್ಮ ಕಣ್ಣಿನ ಮುಂದಿವೆ. ಈಗಾಗಲೇ ನಾವು ಆವರ್ತ ನಿಧಿಯಿಂದ ಉಳ್ಳಾಗಡ್ಡೆಗೆ 2005-06ರಲ್ಲಿ ಸುಮಾರು 80 ಕೋಟಿಯಷ್ಟು ಲುಕ್ಸಾನು ಆಗಿದ್ದು, ಲುಕ್ಸಾನು ಆದರೂ ಸಹ ಖರೀದಿಯನ್ನು ಮಾಡಿದ್ದೇವೆ. ಆಧರೂ ಇವತ್ತು ಕರ್ನಾಟಕದಲ್ಲಿರತಕ್ಕಂತಹ ಸದಾನಂದಗೌಡರ ನೇತೃತ್ವದ ಭಾರತೀಯ ಜನತಾ ಪಕ್ಷದ ಸರ್ಕಾರ ರೈತರ ಪರ ಇರುವಂತಹ ಸರ್ಕಾರ. ಇವತ್ತು ಈರುಳ್ಳಿಬೆಳೆ ಬೆಲೆ ಕುಸಿದು ರೈತರು ಬೆಂಡಾಗಿದ್ದರೂ ಸಹ ನಾವು ರೈತರ ಸಹಾಯಕ್ಕೆ ಹೋಗಿಯೇ ಹೋಗುತ್ತೇವೆ.

(ಗೊಂದಲ)

**ಶ್ರೀ ಬಂಡೆಪ್ಪ ಕಾಶೆಂಪೂರ್** : ಮಾನ್ಯ ಕುಮಾರಸ್ವಾಮಿ ಮುಖ್ಯಮಂತ್ರಿಯಗಿದ್ದಾಗ . . .

**ಅಧ್ಯಕ್ಷರು** : ಇಲ್ಲಿ ಯಾರೇ ಮುಖ್ಯಮಂತ್ರಿಯಿರಲಿ . . . .

**ಶ್ರೀ ಬಂಡೆಪ್ಪ ಕಾಶೆಂಪೂರ್** : ಈ ಮೂರುವರೆ ವರ್ಷಗಳಲ್ಲಿ ರೈತರ ಪರವಾಗಿ ಎಲ್ಲಿದ್ದೀರಿ, ರೈತರಿಗೆ ಎಷ್ಟು ಲುಕ್ಸಾನು ಆಗಿದೆ ಹೇಳಿ.

**ಶ್ರೀ ಉಮೇಶ್ ವಿ. ಕತ್ತಿ** : ಖರೀದಿಗಾರರಿಗೆ ಸಮಸ್ಯೆ ಆಗದ ಹಾಗೆ, ಸರ್ಕಾರದಲ್ಲಿ ಹಣಕಾಸಿನ ಆರ್ಥಿಕ ಸಹಾಯ ಬೇಕಾಗಲಿ ಈ ರೇಟ್‌ನಲ್ಲಿ ಖರೀದಿ ಮಾಡುತ್ತೇವೆ. ಮಾನ್ಯ ಕಳಕಪ್ಪ ಬಂಡಿಯವರು ಎತ್ತಿದಂತಹ ಪ್ರಶ್ನೆಗೆ ಇವತ್ತು ರಾಜ್ಯದಲ್ಲಿ ನಾವು ಸರ್ವೆ ಮಾಡಿ 14 ಸಾವಿರ ರೂಪಾಯಿಗಳು ಈರುಳ್ಳಿ ಬಿತ್ತನೆಗೆ ಖರ್ಚಾಗುತ್ತದೆ ಎಂದು ಲೆಕ್ಕ ಮಾಡಿದ್ದೇವೆ. ಈಗಾಗಲೇ ಅದರ ಬಗ್ಗೆ ಲೆಕ್ಕ ಪತ್ರ ಮಾಡಿದರೂ ಸಹ 24 ಕ್ವಿಂಟಾಲ್ ಇವತ್ತು average ಉತ್ಪಾದನೆ ನಮಗೆ ಬರುತ್ತಿದೆ. ಆ ಲೆಕ್ಕ ತೆಗೆದುಕೊಂಡಾಗ ಒಂದು ಕ್ವಿಂಟಾಲ್ ಈರುಳ್ಳಿ ಬೆಳೆಯುವುದಕ್ಕೆ 583 ರೂಪಾಯಿ ಸಾಕಾಗುತ್ತದೆ. ಆದರೂ, ನಾವು 760 ರೂಪಾಯಿಗಳಿಗೆ ಖರೀದಿ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಬೇಡಿಕೆಗೆ ತಕ್ಕಂತೆ ನಾನೂ ಕೃಷಿ ಮಂತ್ರಿಯಾಗಿ ಕೃಷಿಕನಾಗಿ ನನ್ನ ಅನುಭವದ ಮೇರೆಗೆ ಇವತ್ತು 760 ರೂಪಾಯಿಗಳಿಗೆ ಖರೀದಿ ಪ್ರಾರಂಭ ಮಾಡುತ್ತೇವೆ. ಸೋಮವಾರ ಅಥವಾ ಇನ್ನು 2–3 ದಿವಸಗಳಲ್ಲಿ ಖರೀದಿಯನ್ನು ಪ್ರಾರಂಭ ಮಾಡುತ್ತೇವೆ.

**ಅಧ್ಯಕ್ಷರು** : ಈಗ ಒಂದು ಪ್ರಕಟಣೆ.

**4. ಪ್ರಕಟಣೆ :**

**ಅಧ್ಯಕ್ಷರು** : ಈ ದಿನ ಅಂದರೆ ದಿನಾಂಕ: 14.12.2011ರ ಸಂಜೆ 4:53 ಗಂಟೆಗೆ ಈ ಕೆಳಕಂಡ ಏಳು ಜನರು ಪ್ರೇಕ್ಷಕರ ವೇದಿಕೆಗೆ ಪ್ರವೇಶವನ್ನು ಪಡೆದು ಒಳಮೀಸಲಾತಿ ಮತ್ತು ವರ್ಗೀಕರಣಕ್ಕೆ ಸಂಬಂಧಿಸಿದಂತೆ ಘೋಷಣೆಯನ್ನು ಕೂಗಿದ್ದು, ತಕ್ಷಣ ಅವರುಗಳನ್ನು ಮಾರ್ಷಲ್ ಸಿಬ್ಬಂದಿಗಳು ವಶಕ್ಕೆ ಪಡೆದಿರುತ್ತಾರೆ.